ದಿಃ30.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದಃ

3. ನನಗೆ ಓದಲು ಬರುವುದಿಲ್ಲ.

4. ನಿ.ಪಿ.10 ನ್ನು ನಾನು ಓದಿರುವುದಿಲ್ಲ, ಆದರೆ ಪೊಲೀಸರು ಓದಿರುತ್ತಾರೆ.

5. ನಿಂಬೆಹಣ್ಣು, ಸಣ್ಣ ಬೀಗ, ಒಂದು ಕವರ್‌ಗಳನ್ನು, ನಾನು, ನನ್ನ ಅತ್ತೆಯಾದ ಚಾಸಾ.16 ಇಬ್ಬರೂ ಸೇರಿ ಚಾಸಾ.1 ಮೊಹಮ್ಮದ್ ನೂರುಲ್ಲಾ ಇವರ ಮನೆಯಿಂದ ಒಯ್ದು ಠಾಣೆಯಲ್ಲಿ ಕೊಟ್ಟಿರುತ್ತೇವೆ.

6. ಸದರಿ ವಸ್ತುಗಳನ್ನು ಚಾಸಾ.16 ಇವಳು ಛಜ್ಜಾ ಮೇಲೆ ಇಟ್ಟಿದ್ದನ್ನು ತಂದು ನನಗೆ ತೋರಿಸಿರುತ್ತಾರೆ.

7. ಸದರಿ ವಸ್ತುಗಳು ಇರುವುದರ ಕುರಿತು ಪೊಲೀಸರಿಗೆ ಮನೆಗೆ ಬಂದು ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲು ತಿಳಿಸಿರುವುದಿಲ್ಲ.

8. ಮು.ಮಾ.10 ರಂತಿರುವ ಒಂದು ಸಣ್ಣ ಬೀಗ ಮತ್ತು ಮು.ಮಾ.11 ರಂತಿರುವ ಒಂದು ನಿಂಬೆಹಣ್ಣನ್ನು ಈಗ ನನಗೆ ತೋರಿಸುತ್ತಿದ್ದು, ಅಂತಹವುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎನ್ನುವುದು ಸರಿ.

9. ಸದರಿ ವಸ್ತುಗಳನ್ನು ಚಾಸಾ.16 ಇವಳು ತಂದು ತೋರಿಸಿದ್ದು, ಆ ಮನೆಗೆ ಸಂಬಂಧಿಸಿದ ನಂಬರ್ ಏನು ಎಂಬುದು ನನಗೆ ಗೊತ್ತಿಲ್ಲ.

10. ಮು.ಮಾ.10 ಮತ್ತು 11ಗಳನ್ನು ನಾವು ಪೊಲೀಸರೊಂದಿಗೆ ಶಾಮೀಲಾಗಿ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಖೊಟ್ಟೆಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಎನ್ನುವುದು ಸರಿಯಲ್ಲ.

11. ಸದರಿ ಮನೆಯಲ್ಲಿ ಆ ಸಮಯದಲ್ಲಿ ಚಾಸಾ.1 ಇದ್ದರೂ ಸಹ ಪೊಲೀಸ್ ಠಾಣೆಗೆ ನಮ್ಮೊಂದಿಗೆ ಬಂದಿರಲಿಲ್ಲ, ಆದರೆ ನಾನು ಮತ್ತು ಚಾಸಾ.16 ಮಾತ್ರ ಬೆಳಿಗ್ಗೆ 8.00-8.30ರ ಸಮಯದಲ್ಲಿ ಠಾಣೆಗೆ ಹೋಗಿ ಸದರಿ ಮು.ಮಾ.10 ಮತ್ತು 11 ಕೊಟ್ಟಿರುತ್ತೇವೆ.

12. ಈಗ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.